<u>ದಿನಾಂಕಃ **28-03-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಎಮ್.ಬಿ.ಎನ್. **1** ರಿಂದ **21** ನೇ ಪ್ರತಿವಾದಿಯರ ಪರಃ</u>

ನನ್ನನ್ನು ಮದುವೆ ಮಾಡಿ ಬ್ಯಾಡಗಿ ತಾಲ್ಲೂಕಿನ ದುಮ್ಮಿಹಾಳ ಗ್ರಾಮಕ್ಕೆ ಕೊಟ್ಟಿರುತ್ತಾರೆ. ನಿಮ್ಮ ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಅಂದರೆ ನೆನಪಿಲ್ಲ. ದೊಡ್ಡಹನುಮಪ್ಪನ ತಂದೆ ರಾಮಪ್ಪನಿಗೆ 07 ಜನ ಮಕ್ಕಳು ಇರುತ್ತಾರೆ. ಅವರೆಂದರೆ ದೊಡ್ಡಹನುಮಪ್ಪ, ಸಣ್ಣಹನುಮಪ್ಪ, ದುರ್ಗಪ್ಪ, ದೊಡ್ಡಯಲ್ಲಪ್ಪ, ಭರಮಪ್ಪ, ಸಣ್ಣಯಲ್ಲಪ್ಪ, ಯಂಕಪ್ಪ ಅಂತಾ ಇರುತ್ತಾರೆ. ರಾಮಪ್ಪನಿಗೆ ಹೆಣ್ಣು ಮಕ್ಕಳಿದ್ದು ಅವರ ಹೆಸರು ಯಲ್ಲವ್ವ, ದುರ್ಗವ್ವ, ಹನುಮವ್ವ ಅಂತಾ ಇರುತ್ತಾರೆ. ರಾಮಪ್ಪನ ಹೆಂಡತಿಯ ಹೆಸರು ಬಸವ್ವ. ಬಸವ್ವ ತೀರಿಕೊಂಡಿರುತ್ತಾಳೆ. ರಾಮಪ್ಪ ಮತ್ತು ಬಸವ್ವಳ ಹೆಣ್ಣು ಮಕ್ಕಳನ್ನು ದಾವಾ ಮಾಡುವ ಕಾಲಕ್ಕೆ ಅವರ ಬಗ್ಗೆ ಮಾಹಿತಿ ಕೊಟ್ಟಿರುತ್ತೇವೆ. ದೊಡ್ಡ ಹನುಮಪ್ಪ ಯಾವಾಗ ತೀರಿಕೊಂಡಿರುತ್ತಾರೆ ಅಂತಾ ನೆನಪಿರುವುದಿಲ್ಲ. ಕೆಂಚವ್ವ ತೀರಿಕೊಂಡು 15 ವರ್ಷ ಆಗಿರುತ್ತದೆ.

**<u>2.</u>** 6 ರಿಂದ 21 ನೇ ಪ್ರತಿವಾದಿಯರನ್ನು ಯಾವ ಕಾರಣಕ್ಕಾಗಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಅಂದರೆ, ನಮ್ಮ ತಂದೆಯ ಉತಾರನಲ್ಲಿ ಅವರ ಹೆಸರು ಇದ್ದುದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ದಾವೆ ಹಾಕಿದ ನಂತರ ಉತಾರವನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ಅಕ್ಕ. 1 ನೇ ಪ್ರತಿವಾದಿಯ ಮದುವೆಯಾಗಿರುವುದಿಲ್ಲ. ನಿಮ್ಮ ತಂದೆಗೆ ಎಷ್ಟು ಎಕರೆ ಜಮೀನು ಇರುತ್ತದೆ ಅಂದರೆ ನಮ್ಮ ತಂದೆಗೆ 27 ಎಕರೆ ಜಮೀನು ಇದ್ದು, 3-4 ಮನೆಗಳು ಇರುತ್ತವೆ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯಾವಕಾಶ ನೀಡಲಾಯಿತು)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಾವೇರಿ.

ಓ.ಎಸ್. ನಂ. 55/2023
ಪಿ.ಡಬ್ಲ್ಯೂಃ 1

ಓ.ಎಸ್. ನಂ. 55/2023

ಪಿ.ಡಬ್ಲ್ಯೂ: 1